ಕರುಣಿಸೋ ರಂಗ ಕರುಣಿಸೋ

ಹಗಲು ಇರುಳು ನಿನ್ನ ಸ್ಮರಣೆ ಮರೆಯದನ್ತೆ

ಕರುಣಿಸೋ ರನ್ಗಾ ಕರುಣಿಸೋ

ರುಕುಮಾನ್ಗದನಂತೆ ವ್ರತ ಮಾಡಲರಿಯೆನೋ

ಶುಕಮುನಿಯಂತೆ ಸ್ತುತಿಸಲರಿಯೆ

ಬಕವೈರಿಯಂತೆ ಧ್ಯಾನವ ಮಾಡಲರಿಯೆ

ದೇವಕಿಯಂತೆ ಎತ್ತಿ ಮುದ್ದಿಸಲರಿಯೆ

ಕರುಣಿಸೋ ರಂಗ ಕರುಣಿಸೋ

ಗರುಡನಂತೆ ಪೊತ್ತು ತಿರುಗಲರಿಯೆ

ನಾನು ವರ ಕಪಿಯಂತೆ ಸೇವಿಸಲರಿಯೆ

ಸುರಮುನಿಯಂತೆ ಪಾಡಲರಿಯೆ ನಾನು [ಕರಿರಾಜನಂತೆ ಕರೆಯಲರಿಯೆ]

ಸಿರಿಯಂತೆ ನೆರೆದು ಮೋಹಿಸಲರಿಯೆ

ಕರುಣಿಸೋ ರಂಗ ಕರುಣಿಸೋ

ಬಲಿಯಂತೆ ದಾನವ ಕೊಡಲರಿಯೆನೊ

ಭಕ್ತಿ ಚಲವನರಿಯೆ ಪ್ರಹ್ಲಾದನಂತೆ ಒಲಿಸಲಾರೆನು

ಅರ್ಜುನನಂತೆ ಸಖನಾಗಿ ಸಲಹೋ ದೇವದೇವ ಪುರನ್ದರವಿಟ್ಟಲ

ಕರುಣಿಸೋ ರಂಗ ಕರುಣಿಸೋ